ನಿಶಬ್ದವೂ ಸದ್ದು ಹೊಡೆದು ಮಲಗಿದಂತಿದ್ದು, ಸ್ಮಶಾನ ಮೌನ ಆವರಿಸಿದೆ! ಆದರೆ ಎಚ್ಚರಿದ್ದವರಿಗೆ ಸರಿರಾತ್ರಿಯಲ್ಲಿ ಎದೆ ಝಲ್ಲೆನಿಸುವಂತಹ, ಹೃದಯವಿದ್ರಾವಕ ತೀವ್ರ ರೋದನವೊಂದು ತೇಲಿ ಬರುತ್ತಿದೆ. ಎಂಥ ಕಲ್ಲೆದೆಯವನಲ್ಲಿಯೂ ಕರುಣೆಯುಕ್ಕಿಸುವಂತಿದೆ.

ನಗರದಾಚೆ ದೂರದ ಮಸಣದಲ್ಲಿ ಅಳಿದುಳಿದ ಸೂಡಿನ ಬೆಂಕಿರಾಶಿಯ ಮುಂದೆ ಅರೆನಗ್ನದೇಹ ಮೈಚೆಲ್ಲಿ ಕುಳಿತಿದೆ. ಸುಕ್ಕುಗಟ್ಟಿದ ಚರ್ಮ, ಆಳಕ್ಕಿಳಿದ ಕಣ್ಣು, ಜೋಲುಬಿದ್ದ ಮೊಲೆ, ಒಂದೊಮ್ಮೆ ಮಾಂಸಲವಾಗಿದ್ದ ಶರೀರ ಒಣಗಿ ಎಲುವಿನ ಹಂದರವಾಗಿದೆ. ತಲೆಗೆದರಿದೆ, ಲೋಕದ ಪರಿವೇ ಇಲ್ಲದೆ ತುರಿಸಿಕೊಳ್ಳುತ್ತಿದೆ ದೇಹದ ಸಂದುಗೊಂದುಗಳನ್ನು; ಅಷ್ಟುದೂರಕ್ಕೆ ರಾಚುತ್ತಿದೆ ದುರ್ನಾತ. ಮುಖ ಮೊದಲ್ಗೊಂಡು ಇಡೀ ಶರೀರವೇ ವ್ರಣದ ಮೂಟೆಯಾಗಿದೆ. ಸೋರುತ್ತಿದೆ ಕೀವು, ಕೀಲು ಕೀಲುಗಳಲ್ಲಿ ನೋವು, ಕರುಳು ಕತ್ತರಿಸಿದಂತಹ ಸಂಕಟ! ಹೃದಯ ಹಿಂಡುವ ದೈಹಿಕ ಬಾಧೆಗಳ ಜೊತೆಗೆ ಅಂತರಾಳದಲ್ಲಿ ಅಪರಾಧಿ ಭಾವಗಳ ಹೆಜ್ಜೇನು ಕಡಿತ, ಚುಚ್ಚುವ ಕೆಂಜೆಳು ನಂಜು; ಇದಕ್ಕಿಂತ ಮಿಗಿಲಾದ ಕ್ಷುದ್ಬಾಧೆಯ ಮರ್ಮಾಘಾತ! ಈ ಶಾರೀರಿಕ, ಮಾನಸಿಕ ಕ್ಷೋಭೆಗಳಿಂದ ಜರ್ಜರಗೊಂಡು ಅರೆಜೀವವಾಗಿ ನೋವನ್ನೇ ಉಸಿರಾಡುತ್ತಿದೆ. ದಿಕ್ಕೆಟ್ಟು ಅನಾಥವಾಗಿ ಆಕ್ರಂದಿಸುತ್ತಿದೆ. ಈ ಘೋರಯಾತನೆಗೆ ಕೊನೆಯೆಂದು? ಹತಾಶೆಯಿಂದ ಪರಿತಪಿಸುತ್ತಿದೆ. ಕ್ಷಣಕ್ಷಣಕ್ಕೂ ವೃದ್ಧಿಸುವ ಈ ನೋವು ತಾಳದ ಜೀವಕೆ ಕ್ಷಣವೊಂದು ಯುಗವೆನಿಸುತ್ತಿದೆ!

ಒಂದು ಕಾಲಕ್ಕೆ ರತ್ನಗಂಬಳಿ ಮೇಲೆಯೇ ನಡೆದಾಡಿದ, ಅರಮನೆಯಂತಹ ಭವ್ಯ ಬಂಗಲೆಯಲ್ಲಿ ಬದುಕಿ ಮೃಷ್ಟಾನ್ನವನ್ನೇ ಸವಿದು ಸದಾ ಹಂಸತೂಲಿಕಾತಲ್ಪದಲ್ಲೇ ವಿಹರಿಸಿದ; ಮತ್ತಾರು ಅನುಭವಿಸದ, ಇನ್ನಿಲ್ಲದಂತೆ ರಸಿಕ ಜೀವನ ಭೋಗಿಸಿದ, ದೇವಲೋಕದ ಅಪ್ಸರೆಯೋ? ಇಂದ್ರಲೋಕದ ರಂಭೆ, ಊರ್ವಶಿಯೋ? ಎನ್ನುವಂತೆ ಕಂಗೊಳಿಸಿ ಮೆರೆದಿದ್ದ ರಸಿಕಾಂಗನೆ ವೈಭೋಗದರಸಿಗೆ ಮುಂದೊಮ್ಮೆ ಇಂಥ ದುರ್ಗತಿ ಬರಬಹುದೆಂಬ ಸಣ್ಣ ಶಂಕೆಯೂ ಸುಳಿದಿರಲಿಲ್ಲವೇನೋ? ಅಂತೂ ರೌರವ ನರಕ ಸದೃಶ ಬೀಭತ್ಸ ಸ್ಥಿತಿಯೊದಗಿರುವುದಂತೂ ಈಗಿನ ನಗ್ನ ಸತ್ಯ!

ಹರಿದು ಮುಕ್ಕುವ ಶಾರೀರಿಕ ಬಾಧೆಯಲ್ಲಿಯೂ ಹಾಳು ಮನಸ್ಸು ಬಾಲ್ಯದ, ಯೌವ್ವನದ ರಸಘಳಿಗೆಗಳ ಮೆಲುಕು ಹಾಕುತ್ತಿದೆ. ನೆನಪುಗಳ ಸಾಲು ಸಾಲು ಸರಮಾಲೆ ಚಿತ್ತಪಟಲದಲ್ಲಿ ನಿರಂತರ ಹರಿದಾಡುತ್ತಿದೆ. ನೆನಪುಗಳ ತಾಕಲಾಟದಲ್ಲಿ ಇದ್ದಕ್ಕಿದ್ದಂತೆಯೇ ದೈಹಿಕ ಬಾಧೆ ಧುತ್ತೆಂದು ಕೆರಳುತ್ತದೆ. ಗತನೆನಪು ಮತ್ತು ಪ್ರಸ್ತುತ ಶಾರೀರಿಕ ನೋವುಗಳ ಘರ್ಷಣೆಯಲ್ಲಿ ಎಂದು ಮುಕ್ತವಾಗುವುದೋ? ನೊಂದಜೀವ ಮೊರೆಯಿಡುತ್ತಿದೆ ಕಾಲನಲ್ಲಿ! ಒಂದು ಕಾಲದಲ್ಲಿ ದೇಶವಿದೇಶಗಳ ಚಕ್ರವರ್ತಿಗಳು, ರಾಜರು, ರಾಜಕುವರರು, ಸಿರಿವಂತರು, ಪಂಡಿತ ಪಾಮರರಾದಿಯಾಗಿ ರಸಿಕರೆಲ್ಲರೂ ತ್ರಿಭುವನ ಸುಂದರಿಯೆಂತಿದ್ದ ಈ ವಾರಾಂಗನೆಯ ಅಂಗ ಸಂಗಕ್ಕೆ ಹಾತೊರೆಯುತ್ತಿದ್ದರು. ಹಗಲಿರುಳೂ ಕಾದು ದರುಶನ ಪಡೆದು ಧನ್ಯತೆ ಅನುಭವಿಸುತ್ತಿದ್ದುದು ಸುಳ್ಳೇನಲ್ಲ. ಅವಳ ಕುಡಿನೋಟಕ್ಕಾಗಿ, ಸ್ಪರ್ಶಕ್ಕಾಗಿ, ಸಾಹಚರ್ಯಕ್ಕಾಗಿ, ಮಿಲನಕ್ಕಾಗಿ ಸರ್ವಸ್ವವನ್ನು ಮುಡಿಪಾಗಿಟ್ಟವರೆಷ್ಟೊ? ಚಿರವಿರಹಿಗಳಾಗಿ ಜೀವ ತೊರೆದವರೆಷ್ಟೊ? ಸಹವಾಸದಿ ದೆಸೆಗೆಟ್ಟವರೆಷ್ಟೊ? ಹೆಂಡತಿ ಮಕ್ಕಳ ಜೀವಕ್ಕೆರವಾದವರೆಷ್ಟೊ? ಅಂಗ ಸಂಗಕ್ಕೆ ಬಲಿಯಾಗಿ ನಿರ್ಗತಿಕರಾದವರೆಷ್ಟೊ? ಇವಳ ಸಹವಾಸವೋ ಅತ್ಯದ್ಭುತ! ಈ ರತಿದೇವಿಗೆ ಶರಣಾದವರಿಗೆ ರಸಿಕತೆಯ ದಾಹ ಎಂದೂ ತಣಿಯದಂತಾಗುತ್ತಿತ್ತು! ರಸಿಕತೆಯ ಮೋಹ ಹಿಂಗದೇ ಇರುವ ತೃಷೆಯಾಗಿ ಕಾಡುತ್ತಿತ್ತು! ಇವಳ ಸೆಳೆತ ತಿರುಗಣಿ ಮಡುವೇ ಆಗಿರುತ್ತಿತ್ತು!

ಅಂದೊಮ್ಮೆ ವೈಭೋಗದರಮನೆಯಿತ್ತು. ಹಂಸತೂಲಿಕಾತಲ್ಪವಿತ್ತು. ಕೈಕಾಲುಗಳಿಗೆ ಚಾಕರರಿದ್ದರು. ಇಚ್ಛೆಯನರಿತು ಸೇವೆ ಸಲ್ಲಿಸುವ ಸೇವಕ ಪಡೆಯಿತ್ತು. ಮೃಷ್ಟಾನ್ನ ಭೋಜನವಿತ್ತು. ಸದಾಕಾಲವೂ ವಸಂತ ಋತುವೇ ಆಗಿತ್ತು. ಸರ್ವಸ್ವವನ್ನು ಸೃಜಿಸುವ ಕಲ್ಪವೃಕ್ಷ ಕಾಮಧೇನುವೇ ಇತ್ತು! ಏನೆಲ್ಲಾ ಇತ್ತು. ಸರ್ವಸ್ವವೂ ಇತ್ತು. ಇದೆಲ್ಲದಕ್ಕೂ ಮೂಲ ಅವಳ ಯೌವನದ ಸೌಂದರ್ಯ ಸಂಪತ್ತೇ ಆಗಿತ್ತು! ಹಸಿರೆಂದರೆ ಸದಾ ಹಸಿರು; ಮೈಮನವೆಲ್ಲಾ ಹರುಷದ ಹೊನಲಾಗಿತ್ತು. ಹಸಿವೆಂದರೇನು? ನೋವೆಂದರೇನು? ತೃಷೆಯೆಂದರೇನು? ಅಸುಖವೆಂದರೇನು? ಕೊರತೆಯೆಂದರೇನು? ರೋಗರುಜಿನವೆಂದರೇನು? ಮುಪ್ಪೆಂದರೇನು? ಅರಿವಾಗದಂತಹ ಕಲ್ಪನಾತೀತ ಲೋಕವೇ ಅಲ್ಲಿ ಮೈದಳೆದಿತ್ತು! ಆದರೇನು? ಕಾಲಚಕ್ರ ಗತಿಸಿದಂತೆ ಏನೆಲ್ಲಾ ಬದಲಾವಣೆ! ಇವೆಲ್ಲವುಗಳ ನೆನಪು ಒಲ್ಲೆನೆಂದರೂ ಚಿತ್ತಪಟಲದಲ್ಲಿ ಹರಿದಾಡುತ್ತಿದೆ. ಹಗಲು ಮುಗಿದು ಇರುಳು ಮುಸುಕಿ ಬಿಟ್ಟಿತು. ಯಾವುದು ಸತ್ಯ? ಅಂದಿನ ಸಿರಿಸಂಪದ ಆನಂದಮಯ ಬದುಕೇ? ಅಥವಾ ಇಂದಿನ ಮಸಣವಾಸದ ಘೋರ ನರಕಸದೃಶ ಜೀವನವೇ?

ಯಾವ ಪಾಪಕೆ ಈ ಘೋರ ಶಿಕ್ಷೆ? ಪತಿಯನ್ನಗಲಿಸಿದ್ದಕ್ಕೆ ಗರತಿಯರ ಶಾಪವೇ? ಸುತರನ್ನಗಲಿಸಿದ್ದಕ್ಕೆ ತಾಯಂದಿರ ತಾಪವೇ? ಸಾಂಗತ್ಯದೊರಕದ ರಸಿಕರ ವಿರಹದುರಿಜ್ವಾಲೆಯೋ? ಅಥವಾ ಇವರೆಲ್ಲರ ಕೋಪತಾಪಗಳ ಒಟ್ಟು ಮೊತ್ತದ ಶಾಪವೋ? ಅಂತರಾಳದಲ್ಲಿ ತಾಕಲಾಟ ನಡೆದಿದೆ. ದೈಹಿಕ, ಮಾನಸಿಕ ತುಮುಲಗಳಿಂದ ಜರ್ಜರಗೊಂಡು ದುಃಖಿತಳಾಗಿದ್ದಾಳೆ. ಪರಿಹಾರಕ್ಕಾಗಿ ಪರಿತಪಿಸುತ್ತಿದ್ದಾಳೆ ಪತಿತೆ! ಯಾರೀ ಪಾಪಿಷ್ಠೆ? ಅಮರಪಾಲಿಯೋ? ವಾಸವದತ್ತೆಯೋ? ಚಂದ್ರಸಾನಿಯೋ? ಅಥವಾ ಮತ್ತೋರ್ವಳೋ? ಇವರಂಥವರ ಪೈಕಿ ಯಾರೂ ಇರಬಹುದು!

ಇದ್ದಕ್ಕಿದ್ದಂತೆಯೇ ಪ್ರಶಾಂತತೆ ಆವರಿಸುತ್ತಿದೆ. ದೈಹಿಕ ಬಾಧೆಗಳಿಲ್ಲ, ಮಾನಸಿಕ ಕ್ಷೋಭೆಗಳಿಲ್ಲ, ಇದೆಂಥ ಚಮತ್ಕಾರ ಹಿಂದೆಂದೂ ಅನುಭವಿಸದ ಅನಿರ್ವಚನೀಯ ಶಾಂತಸ್ಥಿತಿ, ನಿರುಮ್ಮಳ ಭಾವ ಮೂಡುತ್ತಿದೆ. ಏನಾಶ್ಚರ್ಯ! ನೋಡುತ್ತಾಳೆ, ಪ್ರಶಾಂತತೆಯೇ ಮೈವೆತ್ತಂತಹ ಭವ್ಯ ಪುರುಷಾಕೃತಿ ಎದುರಲ್ಲೇ ನಿಂತಿದೆ! ಪತಿತ ಪಾವನ ಬುದ್ಧನಂತೆ, ಕರುಣಾಮೂರ್ತಿ ಮಹಾವೀರನಂತೆ! ತನಗರಿವಿಲ್ಲದೆಯೇ ಉರುಳುತ್ತಾಳೆ ಭವ್ಯ ಮೂರುತಿಯಡಿಗೆ. ದುರ್ನಾತ, ದುರ್ದೆಶೆಗಳ ಲೆಕ್ಕಿಸದೇ ತಲೆ ನೇವರಿಸಿ ತನ್ನ ಮೇಲೊದಿಕೆಯನ್ನೇ ಮೈಮೇಲೆ ಹಾಕಿ ಏಳು ಮಗಳೇ, ಎದ್ದೇಳು ಏಕೀ ದುಗುಡ ದುಮ್ಮಾನ ಎಂದು ಕರುಣಾರಸ ಹರಿಸಿದ್ದಾನೆ.

ಮಾಡಿದ ಪಾಪಕೆ ಬಿದ್ದಿರುವೆ ನರಕಕೂಪದಲ್ಲಿ. ಇರಲಿ, ಮಹಾನೀಯರೇ ಏಕೆ ಬಂದಿರಿ ಈ ಪತಿತೆಯೆಡೆಗೆ? ನಿಮ್ಮ ಆತಿಥ್ಯವನ್ನು ಹೇಗೆ ಮಾಡಲಿ, ರೋಗಿಷ್ಠೆ, ಪಾಪಿಷ್ಠೆ ಕೂಡಾ ಎಂದು ಪರಿತಪಿಸುವಳು.

ಅದೇ ನಿರ್ಲಿಪ್ತತೆ, ಅದೇ ಕರುಣಾಭಾವ, ಅದೇ ಶಾಂತರಸ ಉಕ್ಕುತ್ತಿದೆ ಭವ್ಯ ಮೂರುತಿಯಲ್ಲಿ.

ತದೇಕ ಚಿತ್ತದಲ್ಲಿ ಮನದಣಿಯೆ ಹೀರಿಕೊಳ್ಳುತ್ತಿದ್ದಾಳೆ!

ಮಗಳೇ ಕೊರಗಬೇಡ, ವ್ಯಾಕುಲಳಾಗಬೇಡ ಅರುಹಲು ಬಂದಿರುವೆ ನಿನ್ನೆಲ್ಲ ನೋವು ದುಃಖಗಳ ಕಾರಣವ ಮತ್ತೆ ತೋರಬಂದಿರುವೆ ಶಾಂತಿ ಸಮಾಧಾನದ ದಾರಿಯನು; ಎಲ್ಲಿಯಾದರೂ ಉಂಟೆ ಈ ಹತಭಾಗಿನಿಗೆಲ್ಲಿಯ ಶಾಂತಿ ಸಮಾಧಾನ ಹಾಗೆನ್ನದಿರು, ಪರಿಹಾರವುಂಟು ಎಲ್ಲಾ ಸಮಸ್ಯೆಗಳಿಗೆ; ಪ್ರಯತ್ನಬೇಕಷ್ಟೆ.

ಈ ನೋವು ಸಂಕಟಗಳಿಂದ ಬಿಡುಗಡೆಯುಂಟೆ?

ಏಕಿಲ್ಲ? ಎಲ್ಲದರಿಂದಲೂ ಮುಕ್ತವಾಗಲು ಖಂಡಿತ ಸಾಧ್ಯವಿದೆ

ಕಾಲನಿಗೆ ಕರುಣೆಯಿಲ್ಲ ಅವನಾದರೂ ನ್ಯಾಯಪಕ್ಷ. ಗೈದ ಕೃತ್ಯಗಳಿಗನುಗುಣ ವಾಗಿ ನೀಡಿದ್ದನ್ನು ಭೋಗಿಸುತ್ತಿರುವೆ

ಸರಿ, ನಾವು ಗೈದ ಕೃತ್ಯಗಳಿಗನುಸಾರ ಪರಿಣಾಮವಿರುವುದು ಸತ್ಯ

ಹಾಗಿದ್ದ ಮೇಲೆ ಅನುಭವಿಸಲೇಬೇಕಲ್ಲವೇ? ಮನಸ್ಸಿನ ದುಗುಡವನ್ನು ಹೊರಹಾಕುತ್ತಾ ಉಸಿರುಗರೆಯುತ್ತಾಳೆ.

ಕೇವಲ ದರುಶನ ಮಾತ್ರದಿಂದಲೇ ಸುತ್ತಮುತ್ತಲೂ ಶಾಂತತೆ ಪ್ರವಹಿಸುತ್ತಿದೆ. ಆ ಮಹನೀಯನ ಸಹವಾಸದಲ್ಲಿ, ಬೋಧನೆಯಲ್ಲಿ, ಧರ್ಮ ಮಾರ್ಗದಲ್ಲಿ ನಡೆದರೆ ಮಾಡಿರುವ ಪಾಪಗಳನ್ನು ಕಳೆದುಕೊಂಡು ಹೊಸತನ್ನು ಪಡೆಯಬಹುದೆನ್ನುವ ಭರವಸೆಯ ಭಾವ ಮೂಡುತ್ತಿದೆ. ಕರುಣಾಮೂರ್ತಿಯ ಕೇವಲ ಇರುವಿಕೆಯಿಂದಲೇ ಚಿತ್ತಕ್ಷೋಭೆ ಕಳೆಯುತ್ತಿದೆ.

ತನ್ನೊಂದಿಗೆ ಕರೆದೊಯ್ದು ಶುಶ್ರೂಷೆಗೆ ವ್ಯವಸ್ಥೆ ಮಾಡಿಸುತ್ತಾನೆ ಮಹಾನುಭಾವ. ದಿನಕಳೆದಂತೆ ಶಾರೀರಿಕ ಬಾಧೆ ಕಡಿಮೆಯಾಗುತ್ತಿದೆ. ಮಾನಸಿಕ ತುಮುಲ ಉದ್ವಿಗ್ನತೆ ಕೂಡಾ! ಪ್ರತಿನಿತ್ಯ ವಯಸ್ಸು, ಜಾತಿ ಲಿಂಗಭೇದವಿಲ್ಲದೆ ನೂರಾರು ಜನರು ದರುಶನಕ್ಕೆ, ಧ್ಯಾನ ಬೋಧೆಗೆ ಕಾತರರಾಗಿ ಆಗಮಿಸುತ್ತಾರೆ. ಸಂಬುದ್ಧರಿಂದ ಮಾತು ಪ್ರಾರಂಭವಾಗುತ್ತದೆ. ಎಲ್ಲಾ ಒಳಿತು ಕೆಡಕುಗಳಿಗೆ, ಹಾನಿವೃದ್ಧಿಗಳಿಗೆ ಮನಸ್ಸೇ ಕಾರಣ. ನೋವು ನಲಿವುಗಳಿಗೆ ಅಜ್ಞಾನವೇ ಮೂಲ. ಯಾವುದೂ ಸ್ಥಿರವಾಗಿರುವುದಿಲ್ಲ. ನಿರಂತರವಾಗಿ ಬದಲಾಗುತ್ತಿರುವುದೇ ಪ್ರಕೃತಿ ನಿಯಮ. ಸುಖವೆನ್ನುವುದೂ ಶಾಶ್ವತವಲ್ಲ, ಹಾಗೆಯೇ ದುಃಖವೆಂಬುದೂ ಶಾಶ್ವತವಲ್ಲ. ಈಗಾಗಲೇ ಸಂಗ್ರಹಿಸಿರುವ ರಾಗ, ದ್ವೇಷಗಳ ಮೊತ್ತವನ್ನು ನಾಶಗೊಳಿಸಿಕೊಳ್ಳುತ್ತಾ ಮುಂದೆ ಸಂಗ್ರಹಿಸುವುದನ್ನು